ಇ)

	ಗಂಡಸರು	ಹೆಂಗಸರು	ಮಕ್ಕಳು	ಒಟ್ಟು
೧೯೮೭	೨೯೫೦	೪೮೧	೩೦೬	೩೭೩೭
೧೯೮೮	೩೫೦೮	೭೫೪	೩೧೫	೪೫೫೭

ಈ) ೧೯೮೭-೮೮ ರೂ. ೪,೦೬,೦೨,೭೫೫-೦೦
೧೯೮೮-೮೯ ರೂ. ೨,೯೭,೬೧,೯೧೫-೦೦

(ಮೇಲಿನ ಮೊತ್ತಕ್ಕೆ ಹಿಂದಿನ ವರ್ಷಗಳಲ್ಲಿ ಅಪಘಾತಗಳಲ್ಲಿ ನೊಂದವರಿಗೆ ನ್ಯಾಯಾಲಯಗಳಲ್ಲಿ ತೀರ್ಮಾನವಾದ ಪೊತ್ತವು ಸೇರಿರುತ್ತದೆ).

ಉ) ೧೯೮೭ : : ೪೪೨
೧೯೮೮ : : ೩೧೨

ಊ) ಇಲ್ಲ, ನೇಮಕಾತಿ ನಿಯಮಗಳಲ್ಲಿ ಅವಕಾಶಗಳಿರುವುದಿಲ್ಲ.

ಬಿಜಾಪುರ ಜಿಲ್ಲೆಯಲ್ಲಿಯು ಆಂಗನವಾಡಿಗಳ ಕುರಿತು

೯೦೨. ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ) –ಮಾನ್ಯ ಸಮಾಜ ಕಲ್ಯಾಣ ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಿಜಾಪುರ ಜಿಲ್ಲೆಯ ಎಷ್ಟು ಹಳ್ಳಿಗಳಲ್ಲಿ ಆಂಗನವಾಡಿಗಳನ್ನು ತೆರೆಯಲಾಗಿದೆ ?

ಆ) ಆಂಗನವಾಡಿ ತೆರೆಯದಿರುವ ಹಳ್ಳಿಗಳೆಷ್ಟು ?

ಇ) ಬೀಳಗಿ ತಾಲ್ಲೂಕಿನಲ್ಲಿ ಆಂಗನವಾಡಿಗಳನ್ನು ಆರಂಭಿಸುವ ವಿಚಾರವಿದೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಮಾಜ ಕಲ್ಯಾಣ ಸಚಿವರು).—

ಅ) ೪೮೭

ಆ) ೭೫೭

ಇ) ಇದೆ. ಕೇಂದ್ರ ಸರ್ಕಾರ ಹಂತ ಹಂತವಾಗಿ ಮಂಜೂರು ಮಾಡುವುದರಿಂದ ಕಾಲಾವಕಾಶ ಬೇಕಾಗುತ್ತದೆ.

ದಕ್ಷಿಣ ಕನ್ನಡದಲ್ಲಿ ಮಾಸಾಶನ ವೇತನ ಪಡೆದುಕೊಂಡವರು

೯೦೫. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).–ಮಾನ್ಯ ಸಮಾಜ ಕಲ್ಯಾಣ ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೬-೮೭, ೧೯೮೭-೮೮ನೇ ಡಿಸೆಂಬರ್ ಅಖೈರುವರೆಗೆ ಮಾಸಾಶನ ವೇತನ ಪಡೆದುಕೊಂಡಿರುವ ವ್ಯಕ್ತಿಗಳೆಷ್ಟು ? ಅಂಗವಿಕಲರೆಷ್ಟು ? ವಿಧವೆಯರೆಷ್ಟು ? (ಪ್ರತಿ ತಾಲ್ಲೂಕುವಾರು ವಿವರಗಳನ್ನೊದಗಿಸುವುದು)

ಆ) ಇನ್ನು ಈ ರೀತಿಯ ಮಾಸಾಶನ ನೀಡಲು ಬಾಕಿ ಉಳಿದಿರುವ ಅರ್ಜಿಗಳೆಷ್ಟು? ಅವುಗಳನ್ನು ಯಾವಾಗ ವಿಲೇವಾರಿ ಮಾಡಲಾಗುತ್ತದೆ.

ಇ) ಪ್ರತಿ ತಿಂಗಳೂ ಎಲ್ಲಾ ತಾಲ್ಲೂಕುಗಳಲ್ಲಿ ಇದರ ವಿಲೇವಾರಿಗಾಗಿ ಜನ ಸಂಪರ್ಕ ಸಭೆಗಳು ನಡೆಯುತ್ತಿವೆಯೇ? ಇಲ್ಲವಾದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಮಾಜ ಕಲ್ಯಾಣ ಸಚಿವರು).—

ಅ) ಮಾಸಾಶನ ವೇತನ ಮಂಜೂರು ಮಾಡಿದ ಸಂಖ್ಯೆ :

ಸಾಲು : ೧೯೮೬-೮೭	೧೯೮೭-೮೮
ವೃದ್ಧರು ೩೪,೮೫೮	೩೫,೮೩೮
ಅಂಗವಿಕಲರು ೧೨೦೬೦	೧೩೫೫೧
ವಿಧವೆಯರು ೨೯,೩೮೧	೩೧,೯೩೫

(ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ)

ಆ) ಬಾಕಿ ಇರುವ ಅರ್ಜಿಗಳು :

ವೃದ್ಧಾಪ್ಯವೇತನ	೧೬೩
ಅಂಗವಿಕಲರ ವೇತನ	೧೧೩
ವಿಧವಾ ವೇತನ	೨೪೮

ಈ ಅರ್ಜಿಗಳನ್ನು ಪರಿಶೀಲಿಸಿದ ನಂತರ ಅದಷ್ಟು ಜಾಗ್ರತೆ ವಿಲೇವಾರಿ ಮಾಡಲಾಗುವುದು.

ಇ) ಪ್ರತಿ ತಿಂಗಳು ಜನ ಸಂಪರ್ಕ ಸಭೆ ನಡೆಯಬೇಕಿತ್ತಿಲ್ಲ. ವೃದ್ಧರು ಅಂಗವಿಕಲರು ಮತ್ತು ವಿಧವೆಯರ ವೇತನ ಅರ್ಜಿಗಳ ತನಿಖೆ ಮಾಡಿ ಅರ್ಹ ಅರ್ಜಿಗಳಿದ್ದಾಗ ಮಂಜೂರಾತಿ ಆದೇಶವನ್ನು ಜನ ಸಂಪರ್ಕ ಸಭೆಗಳಲ್ಲಿ ಕೊಡಲಾಗುವುದು.

ಅನುಬಂಧ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೬-೮೭ನೇ ಸಾಲಿನಲ್ಲಿ ವೃದ್ಧಾಪ್ಯ ವೇತನ ಅಂಗವಿಕಲರ ವೇತನ, ವಿಧವಾವೇತನ ಪಡೆದಿರುವವರ ತಾಲ್ಲೂಕುವಾರ ವಿವರ.

ತಾಲ್ಲೂಕು	ಮಂಜೂರು ಮಾಡಿದ ಅರ್ಜಿಗಳ ಸಂಖ್ಯೆ		
	ವೃದ್ಧರು	ಅಂಗವಿಕಲರು	ವಿಧವೆಯರು
ಬಂಟ್ವಾಳ	೬೩೧೭	೧೭೩೯	೩೬೯೯
ಮಂಗಳೂರು	೯೮೬೫	೩೫೨೭	೯೩೫೭
ಉಡುಪಿ	೫೭೨೮	೨೨೮೬	೬೫೩೯
ಕುಂದಾಪುರ	೮೯೬೫	೧೩೦೫	೩೬೪೮
ಕಾರ್ಕಳ	೪೪೯೩	೧೭೫೯	೨೬೦೫
ಪುತ್ತೂರು	೨೦೨೪	೬೯೯	೧೩೦೫
ಬೆಳ್ತಂಗಡಿ	೧೯೬೫	೫೮೮	೬೨೭
ಸೂಳ್ಯ	೧೫೦೧	೬೪೭	೧೫೫೧

ತಾಲ್ಲೂಕು	೧೯೮೭-೮೮ (ಡಿಸೆಂಬರ್ ೮೮ರವರೆಗೆ)		
ಬಂಟ್ವಾಳ	೪೩೭೦	೧೭೯೭	೩೭೯೧
ಮಂಗಳೂರು	೧೦೧೧೭	೩೭೨೩	೧೦೧೧೬
ಉಡುಪಿ	೫೯೦೪	೨೪೫೭	೭೨೨೧
ಕುಂದಾಪುರ	೫೧೫೪	೧೫೦೧	೪೦೧೫
ಕಾರ್ಕಳ	೪೫೯೮	೧೮೬೫	೨೮೪೬
ಪುತ್ತೂರು	೨೧೬೪	೮೨೯	೧೪೯೭
ಬೆಳ್ತಂಗಡಿ	೨೦೭೬	೭೦೧	೮೩೦
ಸೂಳ್ಯ	೧೫೫೫	೬೨೮	೧೭೧೯